Crl Mis– 116/2026

ಪಿ. ಡಬ್ಲ್ಯೂನಂ. - 1

ದಿನಾಂಕ:03.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಡಿ.ಎಂ.ಆರ್ ವಕೀಲರಿಂದ –**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತದೆ.

ದಿನಾಂಕ 18.09.2025 ರಂದು ವೈದ್ಯಾಧಿಕಾರಿಗಳು ನೀಡಿದ ಹಿಂಬರಹವನ್ನು ನಿಪಿ–1 ಎಂದು, ಆಧಾರ್ ಕಾರ್ಡ್ ಅನ್ನು ನಿಪಿ–2 ಎಂದು, ತಾಯಿ ಕಾರ್ಡನ್ನು ನಿಪಿ–3 ಎಂದು, ಧೃಡೀಕರಣವನ್ನು ನಿಪಿ–4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಎಂ.ಆರ್. ರವರಿಂದ**

ನನ್ನ ಮಗಳು ದಿನಾಂಕ 02.10.2022 ರಂದು ಸಾಗರದ ಸರ್ಕಾರಿ ಆಸ್ಪತ್ರೆಯಲ್ಲಿ ಜನಿಸಿದ್ದಾಳೆ ಎಂದು ನಾನು ಹೇಳುತ್ತಿದ್ದು, ಜನನ ಪ್ರಮಾಣ ಪತ್ರ ಕೋರಿ ನಾನು ಯಾವುದೇ ಅರ್ಜಿಯನ್ನು ಎದುರುದಾರರ ಕಚೇರಿಗೆ ನೀಡಿರುವುದಿಲ್ಲ. ದಿನಾಂಕ 02.10.2022 ರಂದು ಎದುರುದಾರರ ಕಚೇರಿಗೆ ನಾನು ನನ್ನ ಮಗಳ ಜನನದ ಕುರಿತು ಮೌಖಿಕವಾಗಿ ಮಾಹಿತಿಯನ್ನು ನೀಡಿದ್ದೇನೆ. ನಾನು ನಿಗದಿತ ಕಾಲಾವಧಿಯಲ್ಲಿ ಜನನ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸದ ಕಾರಣ ಪ್ರಸ್ತುತ ಅರ್ಜಿಯಲ್ಲಿ ಕೋರಿರುವಂತೆ ನಾನು ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.